ಬಿಜಾಪುರ ಜಿಲ್ಲಾ ರೈತ ತರಬೇತಿ ಕೇಂದ್ರ ಪ್ರಾರಂಭಿಸುವುದು

50 (169) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ) **ಕೃಷಿ ಸಚಿವರು** ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಜಿಲ್ಲಾ ಕೇಂದ್ರವಾದ ವಿಜಾಪುರ ನಗರದಲ್ಲಿ ಮುಖ್ಯವಾಗಿ ತೊಟಗಾರಿಕೆ ಬೆಳೆಯನ್ನು ಬೆಳೆಯುತ್ತಿದ್ದರೂ ಇಲ್ಲಿ ಜಿಲ್ಲಾ ರೈತ ತರಬೇತಿ ಕೇಂದ್ರ ಇಲ್ಲದಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಇಲ್ಲಿ ಜಿಲ್ಲಾ ರೈತ ತರಬೇತಿ ಕೇಂದ್ರವನ್ನು ಸ್ಥಾಪಿಸುವ ಅಥವಾ ಸಿಂಧಗಿ ತಾಲ್ಲೂಕಿನ ಆಲಮೇಳದಲ್ಲಿರುವ ಉಪ ರೈತ ತರಬೇತಿ ಕೇಂದ್ರವನ್ನು ವಿಜಾಪುರ ನಗರಕ್ಕೆ ಸ್ಥಳಾಂತರಿಸುವ ಪ್ರಸ್ತಾವನೆ ಏನಾದರೂ ಸರ್ಕಾರದ ಮುಂದಿದೆಯೇ;

ಇ. ಆಲಮೇಲದಲ್ಲಿರುವ ರೈತ ತರಬೇತಿ ಉಪ ಕೇಂದ್ರದಲ್ಲಿ ಮೂಲಬೂತ ಸೌಕರ್ಯ., ಸಿಬ್ಬಂದಿ ಕೊರತೆ ಇತ್ಯಾದಿಗಳ ಕೊರತೆಗಳಿರುವುದರಿಂದ ಜಿಲ್ಲೆಯ ರೈತರು ಇದರ ಪ್ರಯೋಜನ ದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಬಿಜಾಪುರದಲ್ಲಿ ಜಿಲ್ಲಾ ರೈತ ತರಬೇತಿ ಕೇಂದ್ರವನ್ನು ಯಾವಾಗ ಪ್ರಾರಂಭಿಸಲಾಗುವುದು;

ಉ. ಅದಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು):

ಅ. ಹೌದು

ಆ. ಹೌದು

ಇ. ಹೌದು

ಈ. 2006–07 ಸಾಲಿನಿಂದ ಪ್ರಾರಂಭಿಸಲು ಯೋಜಿಸಲಾಗಿದೆ.

ಉ. ತರಭೇತಿ ಕೇಂದ್ರದ ಕಟ್ಟಡ ನಿರ್ಮಾಣ ಮತ್ತು ಇತರ ಮೂಲಭೂತ ಸೌಕರ್ಯಗಳಿಗಾಗಿ ರೂ. 20.00 ಲಕ್ಷಗಳನ್ನು ಮೀಸಲಿರಿಸಲಾಗಿದೆ.

ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬಿಜಾಪುರ ಅತ್ಯಂತ ಹಿಂದುಳಿದಂಥ ಜಿಲ್ಲೆಯಾಗಿದೆ. ಬಾಗಲಕೋಟೆ, ಬಿಜಾಪುರ ಬೇರ್ಪಟ್ಟಾಗ ರೈತ ತರಬೇತಿ ಕೇಂದ್ರ ಆ ಕಡೆಗೆ ಹೋಯಿತು. ಸಿಂಧಗಿ ತಾಲ್ಲೂಕಿನಲ್ಲಿ ಈಗ ಒಂದು ಉಪ ಕೇಂದ್ರವಿದೆ. ನಮ್ಮ ಜಿಲ್ಲೆಗೆ ಬಹಳ ಅವಶ್ಯಕವಾಗಿರುವ ಈ ರೈತ ತರಬೇತಿ ಕೇಂದ್ರವನ್ನು 2006–07ನೇ ಸಾಲಿನಿಂದ ಪ್ರಾರಂಭಿಸಲು ಯೋಜಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಮನವಿ ಮಾಡುತ್ತಿದ್ದೇನೆ, ಅದನ್ನು ಈ ವರ್ಷದಲ್ಲೇ ಪ್ರಾರಂಭ ಮಾಡಲು ಆದೇಶಿಸಬೇಕು. ಮತ್ತು ಈ ಬಗ್ಗೆ ತಕ್ಷಣದಲ್ಲೇ ಕ್ರಮ

ತೆಗೆದುಕೊಳ್ಳಬೇಕು. ಕಳೆದ ಬಾರಿ ಮಾನ್ಯ ಶ್ರೀನಿವಾಸಗೌಡರು ಕೃಷಿ ಸಚಿವರಾಗಿದ್ದಾಗಲೂ ನಾನು ಅವರಿಗೆ ಮನವಿ ಮಾಡಿದ್ದೆ, ಅವರ ಕಾಲದಲ್ಲೂ ಏಕೋ ವಿಳಂಬವಾಗಿದೆ. ತಾವು ವಿಳಂಬ ಮಾಡದೇ, ಕೂಡಲೇ ಇದನ್ನು ಪ್ರಾರಂಭ ಮಾಡಲು ಆದೇಶವನ್ನು ಮಾಡುವ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು ಎಂದು ತಮ್ಮ ಮುಖ್ಯಾಂತರ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ: ಮಾನ್ಯ ಅಧ್ಯಕ್ಷರೆ,ಗೌರವಾನ್ವಿತ ಸದಸ್ಯರು ಡಿಸ್ಟ್ರಿಕ್ಟ್ ಅಗ್ರಿಕಲ್ಚರ್ ಟ್ರೈನಿಂಗ್ ಸೆಂಟರ್ ಬೇಕು ಎಂದು ಈಗಾಗಲೇ ಕೇಳಿದ್ದಾರೆ. ಸಿಂಧಗಿ ತಾಲ್ಲೂಕಿನ ಅಲಮೇಲದಲ್ಲಿ ಒಂದು ಉಪ ಕೇಂದ್ರವಿದೆ. ಅದನ್ನು ಬಿಜಾಪುರಕ್ಕೆ ಸ್ಥಳಾಂತರ ಮಾಡುವ ಪ್ರಸ್ತಾಪ ಈಗಾಗಲೇ ಸರ್ಕಾರದ ಮುಂದಿದೆ. ಇದನ್ನು ಸ್ಥಳಾಂತರ ಮಾಡುವ ಕಾರಣವೇನೆಂದರೆ, ಬಿಜಾಪುರದಲ್ಲಿ ಅಗ್ರಿಕಲ್ಚರ್ ಕಾಲೇಜು ಇದೆ. ಆ ಕಾರಣದಿಂದಲಿ ಅಲ್ಲಿ ಸೈಂಟಿಸ್ಟ್‌ಗಳೆಲ್ಲಾ ಇರುತ್ತಾರೆ ಎನ್ನುವ ಕಾರಣದಿಂದ ಇದು ಸ್ಥಳಾಂತರವಾಗುತ್ತದೆ. ಸ್ಥಳಾಂತರವನ್ನು ತಕ್ಷಣ ಆರು ತಿಂಗಳೊಳಗೆ ಮಾಡಬೇಕೆಂದ್ದಿದ್ದೇವೆ. ಅದಕ್ಕೆ ಈಗಾಗಲೇ 20 ಲಕ್ಷ ರೂಪಾಯಿಗಳ ಫಂಡ್‌ಅನ್ನು ಒದಗಿಸಿದ್ದೇವೆ. ಹಾಗಾಗಿ ಈ ಟ್ರೈನಿಂಗ್ ಸೆಂಟರನ್ನು ಆರೇಳು ತಿಂಗಳ ಒಳಗಾಗಿ ಸ್ಥಾಳಾಂತರ ಮಾಡಿ ಪ್ರಾರಂಭ ಮಾಡಲು ಪ್ರಯತ್ನ ಪಡುತ್ತೇವೆ ಎಂದು ತಮ್ಮ ಮುಖಾಂತರ ಹೇಳುತ್ತೇನೆ.

ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆ ವಿಮೆ

51 (263) ಶ್ರೀ ಶಿವರಾಮು ಬಿ. (ಗಂಡಸಿ) ಕೃಷಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2005–06ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆ ವಿಮೆಗಾಗಿ ರೈತರು ಕಟ್ಟಿರುವ ಒಟ್ಟು ಬೆಳೆ ಕಂತಿನ ಮೊತ್ತವೆಷ್ಟು;

ಆ) ಈವರೆಗೆ ಬೆಳೆ ವಿಮೆ ಮಂಜೂರಾತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳೆ ವಿಮಾ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ 2005ರ ಮುಂಗಾರು ಹಂಗಾಮಿನಲ್ಲಿ ಆಲೂಗೆಡ್ಡೆ ಬೆಳೆಗೆ ಒಟ್ಟು 53373 ರೈತರು ರೂ. 11.44 ಕೋಟಿಗಳನ್ನು ವಿಮಾ ಕಂತನ್ನು ಪಾವತಿಸಿ ಭಾಗವಹಿಸಿರುತ್ತಾರೆ.

ಆ) ಬಂದಿದೆ.

ಇ) ಹಾಸನ ಜಿಲ್ಲೆಯ 2005ರ ಮುಂಗಾರು ಹಂಗಾಮಿನಲ್ಲಿ ಆಲೂಗೆಡ್ಡೆ ಬೆಳೆಯ ಹೋಬಳಿವಾರು ಇಳುವರಿ ಮಾಹಿತಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಅಗ್ರಿಕಲ್ಚರ್ ಇನ್ಸೂರೆನ್ಸ್ ಆಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಗೆ ಈಗಾಗಲೇ ನೀಡಿದೆ. ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕುತ್ತಿದೆ. ವಿಮಾ ಸಂಸ್ಥೆಯು ರಾಜ್ಯ ಸರ್ಕಾರದ ಪಾಲಿನ ಹಣವನ್ನು